ಸ್ವಾತಂತ್ರ್ಯ ಯೋಧರಿಗೆ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ

3841(4753); ಶ್ರೀ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಸ್ವಾತಂತ್ರ್ಯ ಯೋಧರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಆರೋಗ್ಯ ಸೇವೆ ಮತ್ತು ಚಿಕಿತ್ಸೆ ಒದಗಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಗಳಲ್ಲಿ ಯಾವ ಯಾವ ಆರೋಗ್ಯ ಸೇವೆಗಳು ಮತ್ತು ಯಾವ ಯಾವ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ;

ಇ) ಈ ಪ್ರಯೋಜನವನ್ನು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಎಷ್ಟು ಮಂದಿ ಸ್ವಾತಂತ್ರ್ಯ ಯೋಧರು ಪಡೆದುಕೊಂಡಿದ್ದಾರೆ; (ಪೂರ್ಣ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಈ) ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ವೆಚ್ಚ ಮಾಡಲಾದ ಹಣವೆಷ್ಟು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು,

ಸ್ವಾತಂತ್ರ್ಯ ಯೋಧರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಆರೋಗ್ಯ ಸೇವೆ ನೀಡಲಾಗುತ್ತಿದೆ.

ಆ) ಸ್ವಾತಂತ್ರ್ಯಯೋಧರ ಖಾಯಿಲೆಗಳ ಅನುಗುಣವಾಗಿ ರಕ್ತದೊತ್ತಡ, ಡಯಾಬಿಟಿಸ್, ಕೀಲುಮೂಳೆ ತೊಂದರೆ, ಚರ್ಮರೋಗ, ಫಿಜಿಯೋಥೆರಪಿ, ಶಸ್ತ್ರಚಿಕಿತ್ಸೆಗಳು, ರಕ್ತ, ಮೂತ್ರ ಪರೀಕ್ಷೆಗಳು ಇತ್ಯಾದಿಗಳನ್ನು ಆಯಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಎಲ್ಲಾ ಸೇವೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಇ) ಸ್ವಾತಂತ್ರ್ಯಯೋಧರು ಚಿಕಿತ್ಸೆ ಪಡೆದ ಬಗ್ಗೆ ಪ್ರತ್ಯೇಕವಾಗಿ ಮಾಹಿತಿಯನ್ನು ಆಸ್ಪತ್ರೆಗಳಲ್ಲಿ ದಾಖಲಿಸಿರುವುದಿಲ್ಲವಾದ್ದರಿಂದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಈ) ಆಸ್ಪತ್ರೆಗಳಲ್ಲಿ ಲಭ್ಯವಿರುವ ಔಷಧಿ ಮತ್ತು ಸೇವೆಗಳನ್ನು ಉಚಿತವಾಗಿ ನೀಡಲಾಗಿರುತ್ತದೆ.

ಅಕ್ರಮ ಪ್ಯಾಕೇಜ್ಡ್ ನೀರಿನ ಘಟಕಗಳು

3844(4268); ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ)

ಅ) ರಾಜ್ಯದಲ್ಲಿರುವ ಒಟ್ಟು ಪ್ಯಾಕೇಜ್ಡ್ ನೀರಿನ ಘಟಕಗಳ ಸಂಖ್ಯೆ ಹಾಗೂ ಅದರಲ್ಲಿ ಅನುಮತಿ ಇಲ್ಲದೆ ಅಕ್ರಮವಾಗಿ ನೀರು ಸರಬರಾಜು ಮಾಡುವ ಘಟಕಗಳ ಸಂಖ್ಯೆ ಎಷ್ಟು; ಆರೋಗ್ಯ ಕಾಪಾಡುವ ನೀರನ್ನು ಅಕ್ರಮವಾಗಿ ಅಶುದ್ಧವಾಗಿ ಪ್ಯಾಕೇಜ್ ಘಟಕಗಳ ಮೂಲಕ ಮಾರುವವರ ಮೇಲೆ ಸರ್ಕಾರ ಕಾನೂನು ಕ್ರಮಕೈಗೊಳ್ಳುವುದೇ?

ಆ) ಐಎಸ್ಐ ಗುಣಮಟ್ಟದ ಪ್ಯಾಕೇಜ್ಡ್ ನೀರಿನ ಘಟಕವನ್ನು ಸ್ಥಾಪಿಸಲು ಇರಬೇಕಾದ ಮಾನದಂಡವೇನು ಹಾಗೂ ಮೂಲ ಸೌಲಭ್ಯಗಳೇನು; ಅನುಮತಿ ನೀಡುವಾಗ ಇರಬೇಕಾದ ಅರ್ಹತಾ ನೀತಿ ನಿಯಮಗಳೇನು?

ಇ) ಪ್ಯಾಕೇಜ್ಡ್ ನೀರು ಬಳಕೆದಾರರ ಸುರಕ್ಷತೆಗಾಗಿ ಸರ್ಕಾರದ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು ಪ್ಯಾಕೇಜ್ಡ್ ನೀರಿನ ಘಟಕಗಳ ಸಂಖ್ಯೆ: 978 ಅವುಗಳಲ್ಲಿ ಅನುಮತಿ ಇಲ್ಲದೇ ನೀರು ಸರಬರಾಜು ಮಾಡುತ್ತಿದ್ದ ಘಟಕಗಳ ಸಂಖ್ಯೆ: 629 ಅಕ್ರಮವಾಗಿ ಅಶುದ್ಧವಾಗಿ ಪ್ಯಾಕೇಜ್ ಘಟಕಗಳ ಮೂಲಕ ಮಾರಾಟ ಮಾಡುವವರ ಮೇಲೆ ಸರ್ಕಾರ ಕಾನೂನು ಕ್ರಮ ತೆಗೆದುಕೊಳ್ಳುತ್ತಿದೆ.